<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆಃ 207/2024

**ಸಾಕ್ಷಿಯನ್ನು ದಿಃ 02.06.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಶಿವರಾಮು | ಸಿಡಬ್ಲ್ಯೂಃ 6 | ಪಿಡಬ್ಲ್ಯೂಃ 5 |
| ತಂದೆಯ ಹೆಸರು | ಕರಿಯಪ್ಪ | | |
| ವಯಸ್ಸು | 49 ವರ್ಷ | | |
| ಕೆಲಸ | ಕೂಲಿ ಕೆಲಸ | | |
| ವಾಸಸ್ಥಳ | ಕಲ್ಲುಣಿಕೆ. | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಸಾಕ್ಷಿ ನಿಪಿ-2ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 22.01.2024 ರಂದು ಚಾಸಾ-2 ರವರ ಮನೆಯ ಹೊರಗೆ ಜಗಳವಾದ ಸ್ಥಳದಲ್ಲಿ ಸಹಿ ಹಾಕಿದ್ದೇನೆ. ಅಲ್ಲಿ ಪೋಲಿಸರು ಮಹಜರು ಮಾಡಲು ಬಂದಿದ್ದರು. ಚಾಸಾ-2 ರವರ ಪತ್ನಿ ಗಲಾಟೆಯ ಸ್ಥಳವನ್ನು ತೋರಿಸಿದರು. ನನ್ನ ಜೊತೆ ಮಹಜರು ಸಮಯದಲ್ಲಿ ಚಾಸಾ-5 ರವರು ಇದ್ದರು. ನಿಪಿ-2ರ ಮಹಜರನ್ನು ಸಂಜೆ 5 ರಿಂದ 6 ಗಂಟೆಯವರೆಗೆ ಮಾಡಿದ್ದಾರೆ. ಸ್ಥಳದಲ್ಲಿ ಪೋಲಿಸರು ಚಾಸಾ-1 ರವರಿಗೆ ಸೇರಿದ ಒಂದು ನೈಟಿ ಮತ್ತು ಚಾಸಾ-2 ರವರಿಗೆ ಸೇರಿದ ಶರ್ಟನ್ನು ಅಮಾನತ್ತುಪಡಿಸಿಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ. ನಿಪಿ-2 ರಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತು.

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ. HK ವಕೀಲರಿಂದಃ**

ನಾನು K.E.B ಗುತ್ತಿಗೆದಾರರ ಬಳಿ ವಿದ್ಯುತ್ ಕಂಬದ ಕೆಲಸಕ್ಕೆ ಹೋಗುತ್ತೇನೆ. ಸಾಮಾನ್ಯವಾಗಿ ನಾನು ಗುತ್ತಿಗೆದಾರರ ಬಳಿ ವಿದ್ಯುತ್ ಕಂಬದ ಕೆಲಸಕ್ಕೆ ಹೋದರೆ ಸಂಜೆಯೇ ವಾಪಸ್ಸಾಗುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗಳಿಗೆ ಹೆಚ್ಚಿನ ಕಂಬದ ಕೆಲಸಕ್ಕೆ

ಹೋದಾಗ ವಾಪಸ್ಸಾಗುವುದು ಸಂಜೆ 6 ರಿಂದ 8 ಗಂಟೆ ಆಗುತ್ತದೆ ಎಂದರೆ ಸರಿ. ಮಹಜರು ಸಮಯದಲ್ಲಿ ಪೋಲಿಸರು ಮತ್ತು ಅಕ್ಕ-ಪಕ್ಕದ ಜನರು ಇದ್ದರು. ನನ್ನನ್ನು ಮತ್ತು ಚಾಸಾ-5 ರವರನ್ನು ಹೊರತುಪಡಿಸಿ ಅಕ್ಕ-ಪಕ್ಕದ ಮನೆಯವರು ಮತ್ತು ಪೋಲಿಸರೆಲ್ಲಾ ಸೇರಿ ಸುಮಾರು 15 ಜನ ಇದ್ದರು. ಮಹಜರು ಸಮಯದಲ್ಲಿ ಪೋಲೀಸರು ನನಗೆ ಮಹಜರಿಗೆ ಬರುವಂತೆ ನೋಟೀಸ್ ಕೊಟ್ಟಿಲ್ಲ. ಮಹಜರಿಗೆ ಬರುವಂತೆ ನನ್ನನ್ನು ಯಾರು ಕರೆದಿಲ್ಲ. ನಿಪಿ-2 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಆ ದಿನ ಸಂಜೆ 4-30ರವರೆಗೆ ನಾನು ಬಿಳಿಕೆರೆಯಲ್ಲಿ ಕೆಲಸ ಮಾಡಿದ್ದೇನೆ. ಆ ಸಮಯದಲ್ಲಿ ಬಿಳಿಕೆರೆಗೆ ಆಟೋದಲ್ಲಿ ಹೋಗಿದ್ದೆ. ಕೆಲಸ ಮುಗಿಸಿಕೊಂಡು ಸಂಜೆ 4.30ಗೆ ಅದೇ ಆಟೋದಲ್ಲಿ ವಾಪಸ್ಸು ಬಂದೆ. ಬಿಳಿಕೆರೆಯಿಂದ 4-30 ಯಿಂದ 4-45ಕ್ಕೆ ಹೊರಟೆವು. ನಾವು ಸುಮಾರು 6-7 ಜನ ಹೊರಟೆವು. ಸಾಮಾನ್ಯವಾಗಿ ಒಂದು ಆಟೋದಲ್ಲಿ ಹುಣಸೂರಿನಿಂದ ಬಿಳಿಕೆರೆಗೆ ಹೋಗಬೇಕಾದರೆ 50 ರಿಂದ 60 ನಿಮಿಷ ಬೇಕಾಗುತ್ತದೆ ಎಂದರೆ ಸರಿ. ಆ ದಿನ 4-45ಕ್ಕೆ ಬಿಳಿಕೆರೆಯಿಂದ ಹೊರಟು ಸುಮಾರು 5-50ಕ್ಕೆ ಹುಣಸೂರಿಗೆ ತಲುಪಿದೆವು ಎಂದರೆ ಸರಿ. ಬಿಳಿಕೆರೆಯಿಂದ ಹುಣಸೂರಿನ ಗೊಡೋನ್ ಗೆ ಬಂದು ಸಾಮಾನು ಇಳಿಸಿದೆವು. ಅಲ್ಲಿ ಸಾಮಾನು ಇಳಿಸಲು ಸುಮಾರು ಕಾಲು ಗಂಟೆ ತೆಗೆದುಕೊಂಡೆವು. ಆ ದಿನ ಸಂಜೆ 6 ಗಂಟೆ ಸಮಯದಲ್ಲಿ ನಾನು ಹುಣಸೂರಿನ ಗೋಡೋನ್ ಬಳಿ ಇದ್ದೆ ಎಂದರೆ ಸರಿ. ಅಲ್ಲಿಂದ ಸಂಜೆ 6 ಗಂಟೆಗೆ ನಾನು ಘಟನಾ ಸ್ಥಳಕ್ಕೆ ಹೋದೆ. ಗೋಡೋನ್ ನಿಂದ ಘಟನಾ ಸ್ಥಳಕ್ಕೆ ಹೋಗಲು ಎಷ್ಟು ಸಮಯ ತೆಗೆದುಕೊಂಡಿದ್ದಿರಿ ಎಂದರೆ ಅಕ್ಕಪಕ್ಕದಲ್ಲಿದೆ. ನಾನು ಘಟನಾ ಸ್ಥಳಕ್ಕೆ ಹೋದಾಗ 6-30 ಆಗಿತ್ತು. ನನ್ನ ಜೊತೆ ಚಾಸಾ-5 ರವರು ಇದ್ದರು. ಅವರು ನನ್ನ ಜೊತೆ ಕಂಬದ ಕೆಲಸವನ್ನೇ ಮಾಡುತ್ತಿದ್ದರು. ನಾನು ಸ್ಥಳಕ್ಕೆ ಹೋಗುವಾಗ ಪೋಲಿಸರು ಬರೆಯಲು ಪ್ರಾರಂಭಿಸಿದರು. ನಿಪಿ-2(ಬಿ) ಸಹಿಯನ್ನು ನಾನು ಪೋಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎನ್ನುವ ಸ್ಥಳದ ಚೆಕ್ಕುಬಂದಿ ಹೇಳಲಾಗುವುದಿಲ್ಲ. ನಾನು ಸ್ಥಳಕ್ಕೆ ಹೋದ ನಂತರ ಪೋಲಿಸರು ಸುಮಾರು ಅರ್ಧಗಂಟೆ ಸ್ಥಳದಲ್ಲಿದ್ದರು. ನನ್ನ ಮನೆಯಿಂದ ಘಟನಾ ಸ್ಥಳ ಸುಮಾರು 10 ನಿಮಿಷ ದೂರ. ಆರೋಪಿ ಮತ್ತು ಚಾಸಾ-2 ರವರ ಮಧ್ಯೆ ಇದ್ದ ಹಳೆ ವೈಷಮ್ಯದ ಬಗ್ಗೆ ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಪೋಲಿಸರು ಪೋಟೋ ತೆಗೆದಿಲ್ಲ. ಮು.ಮಾ-2 ಅನ್ನು ಇದೇ ಮೊದಲಬಾರಿಗೆ

ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಿ ನೋಡಿದ್ದಿರಿ ಎಂದರೆ ಸದರಿ ಮಹಿಳೆ ಧರಿಸಿಕೊಂಡಾಗ ನಾನು ಅದನ್ನು ನೋಡಿದ್ದೇನೆ. ಮು.ಮಾ-1 ರ ಶರ್ಟನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ನನ್ನ ಸಮಕ್ಷಮ ಪೋಲಿಸರು ಯಾವುದೇ ಸ್ಥಳ ಮಹಜರು ಮಾಡಿಲ್ಲ ಮತ್ತು ಮುದ್ದೆ ಮಾಲನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.